**ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ,**

**ಬೆಂಗಳೂರು-560 052.**

ಸಂ.ಆರ್‌ಸಿಎಸ್/ಆರ್‌ಇಸಿ/ಎಸ್‌ಟಿಎಸ್-1/2/2008-2009 ದಿನಾಂಕ: 11-04-2008

ಸುತ್ತೋಲೆ ಸಂಖ್ಯೆ – 202

ವಿಷಯ: 2007-2008 ನೇ ಸಾಲಿನ ಜಿಲ್ಲಾ ವಾರ್ಷಿಕ **ಅಂಕಿ ಅಂಶಗಳು** (ANNUAL NUMERICAL RETURNS) **ಮಾಹಿತಿ ಸಲ್ಲಿಸುವ ಬಗ್ಗೆ.**

**ಉಲ್ಲೇಖ:** Assistant General Manager, NABARD, Bangalore, **ಇವರ ಪತ್ರ ಸಂ.**NB.KA.ST**-25/338/2006-07 ದಿನಾಂಕ: 12-05-2006.**

*****

2007-2008 ನೇ ಸಾಲಿನ ವಾರ್ಷಿಕ ಅಂಕಿ ಅಂಶಗಳನ್ನು ಸಂಗ್ರಹಿಸಿ, ಪರಿಶೀಲಿಸಿ, ಕ್ರೋಢೀಕರಿಸಿ, "ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಮುಂಬಯಿ" ಇವರಿಗೆ ಪ್ರತಿ ವರ್ಷ ಸಕಾಲದಲ್ಲಿ ಕಳುಹಿಸಿಕೊಡಬೇಕೆಂಬ ವಿಷಯ ತಮಗೆ ತಿಳಿದಿರುತ್ತದೆ. 2007-2008 ನೇ ಸಾಲಿಗೆ ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸಬೇಕಾದ ಅವಧಿ ದಿನಾಂಕ: 01-04-2007 ರಿಂದ 31-03-2008 ಆಗಿರುತ್ತದೆ. ಆದುದರಿಂದ 2007-2008 ನೇ ಸಾಲಿನ ಪ್ರಾಥಮಿಕ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಸೂಚಿಸಲಾಗಿದೆ. ಈ ಕೆಲಸಕ್ಕೆ ಕಛೇರಿ ಸಿಬ್ಬಂದಿ ವರ್ಗ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಸಿಬ್ಬಂದಿ ವರ್ಗ, ತಾಲ್ಲೂಕು ಸಹಕಾರ ಸಂಘಗಳ ಸಿಬ್ಬಂದಿ ವರ್ಗ, ಇತ್ಯಾದಿ ಇವುರಗಳಿಗೆ ಕರ್ತವ್ಯವನ್ನು ಹಂಚಿ ಸಂಬಂಧಪಟ್ಟ ಎಲ್ಲಾ ಸಿಬ್ಬಂದಿಗಳ ಸಭೆಯನ್ನು ಕರೆದು, ಸಭೆ ನಡುವಳಿಗಳನ್ನು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಬೇಕು. ಅಲ್ಲದೇ ಈ ಬಗ್ಗೆ ಮಾರ್ಗದರ್ಶನವನ್ನು ನೀಡಲು ಕೇಂದ್ರ ಕಛೇರಿಯ ಸಂಶೋಧನೆ ಮತ್ತು ಮೌಲ್ವೀಕರಣ ಕೋಶದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ವಿಧಧ ಸಹಕಾರ ಸಂಘಗಳ ಅಂಕಿ ಅಂಶಗಳ ತ:ಖ್ತೆಗಳನ್ನು ಗಣಕಯಂತ್ರದಲ್ಲಿ ದಾಖಲಿಸಿ ಸಿಡಿಯಲ್ಲಿ ಶೇಖರಿಸಿ ಸಿಡಿ ಹಾಗೂ ಮುದ್ರಣ ಮಾಡಿದ ಬೈಂಡ್ ಪುಸ್ತಕವನ್ನು ಈ ಕಛೇರಿಗೆ ತಪ್ಪದೇ ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದು. ಪ್ರಾಥಮಿಕ ಅಂಕಿ ಅಂಶಗಳನ್ನು ಸಂಗ್ರಹಿಸಿದ

ನಂತರ ಜಿಲ್ಲಾ ಕ್ರೋಢೀಕೃತ ಮಾಹಿತಿಯನ್ನು ಗಣಕಯಂತ್ರದಲ್ಲಿರುವ ನಬಾರ್ಡ್ ಚೆಕ್‌ಲಿಸ್ಟ್‌ನ (check list for compilation of returns) ಸುಚನೆ ಅನ್ವಯ ಪರಿಶೀಲಿಸಿ ಸಲ್ಲಿಸತಕ್ಕದ್ದು. Error ಗಳು ಕಂಡು ಬಂದಲ್ಲಿ ಸರಿಪಡಿಸತಕ್ಕದ್ದು.

ಈ ಕೆಳಗೆ ತೋರಿಸಿರುವ ಮಾರ್ಗದರ್ಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1) ಸಂಗ್ರಹಿಸಿದ ಮಾಹಿತಿಯನ್ನು ಕಳೆದ ಸಾಲಿಗೆ ಹೋಲಿಸಿ, ಅತಿ ಹೆಚ್ಚಿನ ವ್ಯತ್ಯಾಸಗಳಿದ್ದಲ್ಲಿ ಕಾರಣ ತಿಳಿಸತಕ್ಕದ್ದು.
2) ಮೊಬಲಗನ್ನು ರೂಪಾಯಿಗಳು ಸಾವಿರಗಳಲ್ಲಿಯೇ (000) ನಮೂದಿಸತಕ್ಕದ್ದು. ಪ್ರಾಥಮಿಕ ಹಂತದಲ್ಲಿ ಮಾತ್ರ ವಾಸ್ತವಿಕ ಮೊಬಲಗನ್ನು ಸಂಗ್ರಹಿಸಿ, ಕ್ರೋಢೀಕರಿಸಿದ ಜಿಲ್ಲಾ ಮೊಬಲಗನ್ನು ತಪ್ಪದೇ ಸಾವಿರ ರೂಪಾಯಿಗಳಲ್ಲಿ ನಮೂದಿಸತಕ್ಕದ್ದು.
3) ಒಟ್ಟು ಸದಸ್ಯರ ಸಂಖ್ಯೆಯ ಮಾಹಿತಿಯನ್ನು ನಿಗಧಿತ ನಮೂನೆಯ ಕಾಲಂನಲ್ಲಿ ತಿಳಿಸಿದ ಹಾಗೆ ಸಾವಿರಗಳಲ್ಲಿಯೇ (000) ಅಥವಾ ನೈಜವಾಗಿ ನಮೂದಿಸತಕ್ಕದ್ದು.
4) ತ:ಖ್ತೆಗಳಲ್ಲಿ ಬರುವ ಗ್ರಾಮಗಳ ಸಂಖ್ಯೆ, ಮಂಡಿಗಳ ರೆಗ್ಯೂಲೇಟಡ್ ಮಂಡಿಗಳು, ಇತ್ಯಾದಿಗಳನ್ನು ನಿಖರವಾಗಿ ನಮೂದಿಸತಕ್ಕದ್ದು (2001 ರ ಜನಗಣತಿಯ ಅನ್ವಯ)
5) ಒಟ್ಟು ಮೊತ್ತದ ಅಂಕಣವು (ಪ್ರೈಮರಿ ಟೋಟಲ್) ಅದಕ್ಕೆ ಸಂಬಂಧಿಸಿದ ಉಪ ಅಂಕಣದ ಅಂಶಗಳಿಗೆ ಸರಿಯಾಗಿರಬೇಕು. ಕೆಲವು ಜಿಲ್ಲೆಗಳ ಮಾಹಿತಿಯಲ್ಲಿ ಒಟ್ಟು ಮೊತ್ತ (ಪ್ರೈಮರಿ ಟೋಟಲ್) ನಮೂದಿಸಿರುವುದಿಲ್ಲ. ತಪ್ಪದೇ ನಮೂದಿಸತಕ್ಕದ್ದು.
6) ದುಡಿಯುವ ಬಂಡವಾಳ :– ದುಡಿಯುವ ಬಂಡವಾಳ (Working Capital) ಎಂಬ ಪದ ಪುಂಜವು ಕೂಡಿಬಿದ್ದ ಹಂಚಿಕೆ ಆಗದ ಲಾಭ ಇದ್ದರೆ ಅದೂ ಸೇರಿದಂತೆ, ಆದರೆ ಸಂಗ್ರಹಣೆ ಬಿಲ್ಲುಗಳು, ರಾಜ್ಯ ಪಾಲುಗಾರಿಕೆ ನಿಧಿ, ಸಿಬ್ಬಂದಿ ಭವಿಷ್ಯ ನಿಧಿ, ಮುಂತಾದ ಕಾಂಟ್ರ (contra) ಬಾಬ್ತುಗಳನ್ನು ಮತ್ತು ಸಂಚಿತ ನಷ್ಟವನ್ನು ಹೊರತುಪಡಿಸಿ, ಆಸ್ತಿ–ಜವಾಬ್ದಾರಿ ಪಟ್ಟಿಯ ಜವಾಬ್ದಾರಿ ಭಾಗದಲ್ಲಿ ಕಂಡು ಬರುವ ಎಲ್ಲಾ ಬಾಬ್ತುಗಳ ಮೊತ್ತವಾಗಿರುತ್ತದೆ.
7) ಒಟ್ಟು ಹೊಣೆಗಳು:– ಇದು ಜವಾಬ್ದಾರಿ ಪಟ್ಟಿಯಲ್ಲಿ ಕಾಂಟ್ರ ಬಾಬ್ತಗಳು ಮತ್ತು ಲಾಭದ ಬಾಕಿಯ ಹೊರತಾಗಿ, ಎಲ್ಲಾ ಬಾಬ್ತುಗಳ ಮೊತ್ತ ಆಗಿರತಕ್ಕದ್ದು.
8) ಒಟ್ಟು ಆಸ್ತಿಗಳು :– ಇದು ಆಸ್ತಿ ಪಟ್ಟಿಯಲ್ಲಿ ಕಾಂಟ್ರ ಬಾಬ್ತುಗಳು ಮತ್ತು ಸಂಚಿತ ನಷ್ಟಗಳು ಯಾವುದಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ, ಎಲ್ಲಾ ಬಾಬ್ತುಗಳ ಮೊತ್ತ ಆಗಿರತಕ್ಕದ್ದು.

9) 10 ರಿಂದ 17 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳು ತ:ಖ್ತೆಯಿಂದ ಇತರೆ ತ:ಖ್ತೆಗಳ ಅಂಕಿ ಅಂಶಗಳಿಗೆ ತಪ್ಪದೇ ತಾಳೆ ಇರತಕ್ಕದ್ದು.

10) 19 ರಿಂದ 21 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿಂಗ್ ರೆಗ್ಯೂಲೇಶನ್ ಕಾಯ್ದೆ ಅಡಿಯಲ್ಲಿ ಬರುವ

1) ಪಟ್ಟಣ ಸಹಕಾರ ಬ್ಯಾಂಕುಗಳು

2) ನೌಕರರ ಪತ್ತಿನ ಸಹಕಾರ ಬ್ಯಾಂಕುಗಳು

3) ಇತರೆ ಪತ್ತಿನ ಸಹಕಾರ ಸಂಘಗಳ

ಮಾಹಿತಿಯನ್ನು ಸಹಕಾರ ಸಂಘಗಳ ಪಟ್ಟಿಯಲ್ಲಿ ನಮೂದಿಸಿದ ಒಟ್ಟು ಸಂಘಗಳಿಗೆ ತಾಳೆಯಾಗತಕ್ಕದ್ದು.

11) 22 ರಿಂದ 25 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ ಅಡಿಯಲ್ಲಿ ಬರದೇ ಇರುವ

1) ಪಟ್ಟಣ ಸಹಕಾರ ಬ್ಯಾಂಕುಗಳು

2) ನೌಕರರ ಪತ್ತಿನ ಸಹಕಾರ ಬ್ಯಾಂಕುಗಳು

3) ಇತರೆ ಪತ್ತಿನ ಸಹಕಾರ ಸಂಘಗಳ

ಮಾಹಿತಿಯನ್ನು ಸಹಕಾರ ಸಂಘಗಳ ಪಟ್ಟಿಯಲ್ಲಿ ನಮೂದಿಸಿದ ಒಟ್ಟು ಸಂಘಗಳಿಗೆ ತಾಳೆಯಾಗತಕ್ಕದ್ದು.

ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳು, ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರನ್ವಯ ನೋಂದಾಯಿಸಿದ, ಎಲ್ಲಾ ಸಹಕಾರ ಸಂಘಗಳ ಅಂದರೆ, ಗ್ರಾಮ ಮಟ್ಟದ ತಾಲ್ಲೂಕು ಮಟ್ಟ ಮತ್ತು ತಾಲ್ಲೂಕು ಮಟ್ಟ ಮೀರಿ, ಜಿಲ್ಲಾ ಮಟ್ಟ ಮತ್ತು ಜಿಲ್ಲಾ ಮಟ್ಟ ಮೀರಿ, ರಾಜ್ಯ ಮಟ್ಟ ಮತ್ತು ರಾಜ್ಯ ಮಟ್ಟ ಮೀರಿ, ಅಂಕಿ ಅಂಶಗಳ ಮಾಹಿತಿಯನ್ನು ತಪ್ಪದೇ ಸಂಬಂಧಿಸಿದ ಸಂಬಂಧಿಸಿದ ತ:ಖ್ತೆಗಳಲ್ಲಿ ನಮೂದಿಸತಕ್ಕದ್ದು. ಅಂಕಿ ಅಂಶದ ಟೇಬಲ್ ಸಂಖ್ಯೆ: 46ಃ-ರಲ್ಲಿ ಮೇಲೆ ತಿಳಿಸಿರುವ ಎಲ್ಲಾ ಸಹಕಾರ ಸಂಘಗಳ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸೇರಿದಂತೆ ಉದ್ಯೋಗಿಗಳ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಿ ತಪ್ಪದೇ ಸಲ್ಲಿಸತಕ್ಕದ್ದು. ಈ ವಿಷಯವನ್ನು ಜಿಲ್ಲಾ ಉಪ ನಿಬಂಧಕರುಗಳು ವೈಯಕ್ತಿಕವಾಗಿ ಗಮನದಲ್ಲಿ ಇಟ್ಟುಕೊಳ್ಳತಕ್ಕದ್ದು.

12) 2006–2007 ರಲ್ಲಿ ಕಳುಹಿಸಿರುವ ಅಂಕಿ ಅಂಶಗಳ ಮಾಹಿತಿಗಳು ಅನಗತ್ಯವಾಗಿ 2007–2008 ರ ಅಂಕಿ ಅಂಶಗಳ ಮಾಹಿತಿಗಳಲ್ಲಿ ಪುನರಾವರ್ತನೆ ಆಗಬಾರದು.

13) ವಾರ್ಷಿಕ ಮುಂಗಡ ಅಂಕಿ ಅಂಶಗಳ (Advance Statistics) ಮಾಹಿತಿಯಲ್ಲಿ ತೋರಿಸಿದ ಸಹಕಾರ ಸಂಘಗಳ ಒಟ್ಟು ಸಂಖ್ಯೆಗೂ, ವಾರ್ಷಿಕ ಅಂಕಿ ಅಂಶಗಳ (Annual Numerical Returns) ಮಾಹಿತಿಯಲ್ಲಿ ತೋರಿಸಿದ ಒಟ್ಟು ಸಹಕಾರ ಸಂಘಗಳ ಸಂಖ್ಯೆಗಳಿಗೂ ಹಾಗೂ ವಿವಿಧ ಸಹಕಾರ ಸಂಘಗಳ (List of Societies) ಒಟ್ಟು ಸಂಖ್ಯೆಗೂ ತಾಳೆ ಇರತಕ್ಕದ್ದು.

ವಾರ್ಷಿಕ ಮುಂಗಡ ಅಂಕಿ ಅಂಶಗಳು (Advance Statistics) ವಾರ್ಷಿಕ ಅಂಕಿ ಅಂಶಗಳ (Annual Numerical Returns) ತ:ಖ್ತೆಗಳು ಕಾರ್ಯ ಮುಗಿಯುವ ತನಕ ಸಂಬಂಧಿಸಿದ ಸಿಬ್ಬಂದಿಗೆ ಇತರೆ ಕೆಲಸಗಳ ನಿರ್ವಹಣೆಯನು ಸಾಧ್ಯವಾದಷ್ಟು ವಹಿಸಕೂಡದೆಂದು ಸೂಚಿಸಿದೆ.

9 ರಿಂದ 51 ರವರೆಗೆ ಪೂರ್ಣ ಅಂಕಿ ಅಂಶಗಳನ್ನು ದಾಖಲಿಸಿದ ತರುವಾಯ ಕೆಲವು ಮುಖ್ಯವಾದ ಟೇಬಲ್‌ಗಳ ಕೆಳಗೆ ಒಂದು ಕಪ್ಪು ಸರಿಪಡಿಸುವ ಯಾದಿ (ERROR LIST)ಯನ್ನು ಗಣಕಯಂತ್ರದಲ್ಲಿ ಅಳವಡಿಸಲಾಗಿದೆ. ಸಂಬಂಧಪಟ್ಟ ಟೇಬಲ್ ಗಳಲ್ಲಿ ತಾಳೆಯಾಗಿರುವ ಅಂಕಿ ಅಂಶಗಳನ್ನು ದಾಖಲಿಸಿದರೆ OD-NO-ERROR ಎಂದು ಸೂಚಿಸುತ್ತದೆ. ತಪ್ಪು ಅಂಕಿ ಅಂಶಗಳನ್ನು ದಾಖಲಿಸಿದರೆ ERROR DETECTED ಅಂತಾ ತಿಳಿಸಿ, ಅದಕ್ಕೆ ಸಂಬಂಧಪಟ್ಟ ತಪ್ಪುಗಳನ್ನು ಹೇಗೆ ನಿವಾರಿಸಬೇಕು ಎಂಬ ನಿರ್ದೇಶನಗಳನ್ನು ಟೇಬಲ್ ಕೆಳಗೆ ತಪ್ಪು ಸರಿಪಡಿಸುವ ಯಾದಿ (ERROR LIST) ಯಲ್ಲಿ ಕಂಡು ಬರುತ್ತವೆ.

ಅದರ ಪ್ರಕಾರ ಸರಿಯಾದ ಅಂಕಿ ಅಂಶಗಳನ್ನು ದಾಖಲಿಸಿ, ERROR LIST ನಲ್ಲಿ OK-NO-ERROR ಬಂದ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ಆದರೂ ಮಾಹಿತಿಗಳ ನಿಖರತೆಯನ್ನು ಪರಿಶೀಲಿಸದೇ, ಕೆಲವು ಉಪ ನಿಬಂಧಕರುಗಳು ಹಿಂದಿನ ವರ್ಷ ಕಳುಹಿಸಿದ್ದರಿಂದ ಕ್ರೋಢೀಕೃತ ಅಂಕಿ ಅಂಶಗಳನ್ನು ಸಮರ್ಪಕವಾಗಿ ಸಿದ್ಧಪಡಿಸಲು ತೊಂದರೆ ಉಂಟಾದ ಅನುಭವಗಳು ಈ ವರ್ಷವು ಉಂಟಾಗಿರುತ್ತವೆ. ಈ ಹಿನ್ನೆಲೆಯಲ್ಲಿ, ವಾರ್ಷಿಕ ಅಂಕಿ ಅಂಶಗಳನ್ನು ಸರಿಯಾಗಿ ಸಕಾಲದಲ್ಲಿ ಸಲ್ಲಿಸುವ ಅಂಶವನ್ನು ನಿರ್ಲಕ್ಷಿಸದೇ ಹೆಚ್ಚಿನ ಶ್ರದ್ಧೆವಹಿಸಿ ಮಾಹಿತಿಗಳನ್ನು ನಿಗಧಿಪಡಿಸಿದ ಅವಧಿ ಒಳಗಾಗಿ ಸಲ್ಲಿಸಲು ಸೂಚಿಸಿದೆ.

ಈ ಸೂಚನೆಯನ್ನು ಕಡೆಗಣಿಸಿದಲ್ಲಿ ವಿಷಯವನ್ನು ತೀವ್ರವಾಗಿ ಪರಿಗಣಿಸಲಾಗುವುದು.

2007–2008 ರ ವಾರ್ಷಿಕ ಅಂಕಿ ಅಂಶ (ANNUAL NUMERICAL RETURNS) ಗಳನ್ನು ಪರಿಷ್ಕೃತವಾದ ಟೇಬಲ್‌ಗಳಲ್ಲಿ ಸಂಗ್ರಹಿಸಿ ಪರಿಶೀಲಿಸಿ, ಕ್ರೋಢೀಕರಿಸಿ ನಿಖರವಾದ ಮಾಹಿತಿಯನನು ಗಣಕಯಂತ್ರದಲ್ಲಿ ಅಳವಡಿಸಿ ಸಿಡಿಯನ್ನು ಹಾಗೂ ಮುದ್ರಿಸಿ ಬೈಂಡ್ ಮಾಡಿದ ಪ್ರತಿಯೊಂದಿಗೆ ಈ ಕಛೇರಿಗೆ ತಮ್ಮ ವೈಯಕ್ತಿಕ ಜವಾಬ್ದಾರಿಯೊಡನೆ ದಿನಾಂಕ 30–06–2008 ರ ಒಳಗೆ ಕಳುಹಿಸಲು ಸೂಚಿಸಲಾಗಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು
(ಆಡಳಿತ ಮತ್ತು ಅಭಿವೃದ್ಧಿ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ,**

**ಬೆಂಗಳೂರು-560 052.**

**ಸಂ.ಆರ್‌ಸಿಎಸ್/ಆರ್‌ಇಸಿ/ಆರ್-4/1/2009-2010** **ದಿನಾಂಕ: 03-04-2009**

## ಸುತ್ತೋಲೆ ಸಂಖ್ಯೆ – 203

**ವಿಷಯ: 2007-2008 ನೇ ಸಾಲಿನ ಜಿಲ್ಲಾ ವಾರ್ಷಿಕ ಅಂಕಿ ಅಂಶಗಳು** (ANNUAL NUMERICAL RETURNS) **ಮಾಹಿತಿ ಸಲ್ಲಿಸುವ ಬಗ್ಗೆ.**

**ಉಲ್ಲೇಖ:** Assistant General Manager, NABARD, Bangalore, **ಇವರ ಪತ್ರ ಸಂ.**NB.KA.ST**-25/338/2006-07 ದಿನಾಂಕ:12-05-2006.**

*****

2007-2008 ನೇ ಸಾಲಿನ ವಾರ್ಷಿಕ ಅಂಕಿ ಅಂಶಗಳನ್ನು ಸಂಗ್ರಹಿಸಿ, ಪರಿಶೀಲಿಸಿ, ಕ್ರೋಢೀಕರಿಸಿ, **"ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಮುಂಬಯಿ"** ಇವರಿಗೆ ಪ್ರತಿ ವರ್ಷ ಸಕಾಲದಲ್ಲಿ ಕಳುಹಿಸಿಕೊಡಬೇಕೆಂಬ ವಿಷಯ ತಮಗೆ ತಿಳಿದಿರುತ್ತದೆ. **2008-2009 ನೇ ಸಾಲಿಗೆ** ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸಬೇಕಾದ ಅವಧಿ ದಿನಾಂಕ: **01-04-2008 ರಿಂದ 31-03-2009** ಆಗಿರುತ್ತದೆ. ಆದುದರಿಂದ 2008-2009 ನೇ ಸಾಲಿನ ಪ್ರಾಥಮಿಕ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಸೂಚಿಸಲಾಗಿದೆ. ಈ ಕೆಲಸಕ್ಕೆ ಕಛೇರಿ ಸಿಬ್ಬಂದಿ ವರ್ಗ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಸಿಬ್ಬಂದಿ ವರ್ಗ, ತಾಲ್ಲೂಕು ಸಹಕಾರ ಸಂಘಗಳ ಸಿಬ್ಬಂದಿ ವರ್ಗ, ಇತ್ಯಾದಿ ಇವುರಗಳಿಗೆ ಕರ್ತವ್ಯವನ್ನು ಹಂಚಿ ಸಂಬಂಧಪಟ್ಟ ಎಲ್ಲಾ ಸಿಬ್ಬಂದಿಗಳ ಸಭೆಯನ್ನು ಕರೆದು, ಸಭೆ ನಡುವಳಿಗಳನ್ನು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಬೇಕು. ಅಲ್ಲದೇ ಈ ಬಗ್ಗೆ ಮಾರ್ಗದರ್ಶನವನ್ನು ನೀಡಲು ಕೇಂದ್ರ ಕಛೇರಿಯ ಸಂಶೋಧನೆ ಮತ್ತು ಮೌಲ್ವೀಕರಣ ಕೋಶದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ವಿಧಧ ಸಹಕಾರ ಸಂಘಗಳ ಅಂಕಿ ಅಂಶಗಳ ತ:ಖ್ತೆಗಳನ್ನು ಗಣಕಯಂತ್ರದಲ್ಲಿ ದಾಖಲಿಸಿ ಸಿಡಿಯಲ್ಲಿ ಶೇಖರಿಸಿ ಸಿಡಿ ಹಾಗೂ ಮುದ್ರಣ ಮಾಡಿದ ಬೈಂಡ್ ಪುಸ್ತಕವನ್ನು ಈ ಕಛೇರಿಗೆ ತಪ್ಪದೇ ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದು. ಪ್ರಾಥಮಿಕ ಅಂಕಿ ಅಂಶಗಳನ್ನು ಸಂಗ್ರಹಿಸಿದ ನಂತರ ಜಿಲ್ಲಾ ಕ್ರೋಢೀಕೃತ ಮಾಹಿತಿಯನ್ನು ಗಣಕಯಂತ್ರದಲ್ಲಿರುವ ನಬಾರ್ಡ್ ಚೆಕ್‌ಲಿಸ್ಟ್‌ನ (check list for compilation of returns) ಸುಚನೆ ಅನ್ವಯ ಪರಿಶೀಲಿಸಿ ಸಲ್ಲಿಸತಕ್ಕದ್ದು. ಇಡಿಡಿಂಡಿ ಗಳು ಕಂಡು ಬಂದಲ್ಲಿ ಸರಿಪಡಿಸತಕ್ಕದ್ದು.

**ಈ ಕೆಳಗೆ ತೋರಿಸಿರುವ ಮಾರ್ಗದರ್ಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.**

1. ಸಂಗ್ರಹಿಸಿದ ಮಾಹಿತಿಯನ್ನು ಕಳೆದ ಸಾಲಿಗೆ ಹೋಲಿಸಿ, ಅತಿ ಹೆಚ್ಚಿನ ವ್ಯತ್ಯಾಸಗಳಿದ್ದಲ್ಲಿ ಕಾರಣ ತಿಳಿಸತಕ್ಕದ್ದು.
2. ಮೊಬಲಗನ್ನು ರೂಪಾಯಿಗಳು ಸಾವಿರಗಳಲ್ಲಿಯೇ (000) ನಮೂದಿಸತಕ್ಕದ್ದು. ಪ್ರಾಥಮಿಕ ಹಂತದಲ್ಲಿ ಮಾತ್ರ ವಾಸ್ತವಿಕವಾಗಿ ಮೊಬಲಗನ್ನು ಸಂಗ್ರಹಿಸಿ, ಕ್ರೋಢೀಕರಿಸಿದ ಜಿಲ್ಲಾ ಮೊಬಲಗನ್ನು ಸಾವಿರ ರೂಪಾಯಿಗಳಲ್ಲಿ ತಪ್ಪದೇ ನಮೂದಿಸತಕ್ಕದ್ದು.
3. ಒಟ್ಟು ಸದಸ್ಯರ ಸಂಖ್ಯೆಯ ಮಾಹಿತಿಯನ್ನು ನಿಗಧಿತ ನಮೂನೆಯ ಕಾಲಂನಲ್ಲಿ ತಿಳಿಸಿದ ಹಾಗೆ ನೈಜವಾಗಿ (ACTUAL) ನಮೂದಿಸತಕ್ಕದ್ದು.
4. ತ:ಖ್ತೆಗಳಲ್ಲಿ ಬರುವ ಗ್ರಾಮಗಳ ಸಂಖ್ಯೆ, ಮಂಡಿಗಳ ರೆಗ್ಯೂಲೇಟಡ್ ಮಂಡಿಗಳು, ಇತ್ಯಾದಿಗಳನ್ನು ನಿಖರವಾಗಿ ನಮೂದಿಸತಕ್ಕದ್ದು (2001 ರ ಜನಗಣತಿಯ ಅನ್ವಯ)
5. ಒಟ್ಟು ಮೊತ್ತದ ಅಂಕಣವು (ಪ್ರೈಮರಿ ಟೋಟಲ್) ಅದಕ್ಕೆ ಸಂಬಂಧಿಸಿದ ಉಪ ಅಂಕಣದ ಅಂಶಗಳಿಗೆ ಸರಿಯಾಗಿರಬೇಕು. ಕೆಲವು ಜಿಲ್ಲೆಗಳ ಮಾಹಿತಿಯಲ್ಲಿ ಒಟ್ಟು ಮೊತ್ತ (ಪ್ರೈಮರಿ ಟೋಟಲ್) ನಮೂದಿಸಿರುವುದಿಲ್ಲ. ತಪ್ಪದೇ ನಮೂದಿಸತಕ್ಕದ್ದು.
6. ದುಡಿಯುವ ಬಂಡವಾಳ :- ದುಡಿಯುವ ಬಂಡವಾಳ (Working Capital) ಎಂಬ ಪದ ಪುಂಜವು ಕೂಡಿಬಿದ್ದ ಹಂಚಿಕೆ ಆಗದ ಲಾಭ ಇದ್ದರೆ ಅದೂ ಸೇರಿದಂತೆ, ಆದರೆ ಸಂಗ್ರಹಣೆ ಬಿಲ್ಲುಗಳು, ರಾಜ್ಯ ಪಾಲುಗಾರಿಕೆ ನಿಧಿ, ಸಿಬ್ಬಂದಿ ಭವಿಷ್ಯ ನಿಧಿ, ಮುಂತಾದ ಕಾಂಟ್ರ (contra) ಬಾಬ್ತುಗಳನ್ನು ಮತ್ತು ಸಂಚಿತ ನಷ್ಟವನ್ನು ಹೊರತುಪಡಿಸಿ, ಆಸ್ತಿ–ಜವಾಬ್ದಾರಿ ಪಟ್ಟಿಯ ಜವಾಬ್ದಾರಿ ಭಾಗದಲ್ಲಿ ಕಂಡು ಬರುವ ಎಲ್ಲಾ ಬಾಬ್ತುಗಳ ಮೊತ್ತವಾಗಿರುತ್ತದೆ.

7. ಒಟ್ಟು ಹೊಣೆಗಳು:– ಇದು ಜವಾಬ್ದಾರಿ ಪಟ್ಟಿಯಲ್ಲಿ ಕಾಂಟ್ರ ಬಾಬ್ತುಗಳು ಮತ್ತು ಲಾಭದ ಬಾಕಿಯ ಹೊರತಾಗಿ, ಎಲ್ಲಾ ಬಾಬ್ತುಗಳ ಮೊತ್ತ ಆಗಿರತಕ್ಕದ್ದು.

8. ಒಟ್ಟು ಆಸ್ತಿಗಳು :– ಇದು ಆಸ್ತಿ ಪಟ್ಟಿಯಲ್ಲಿ ಕಾಂಟ್ರ ಬಾಬ್ತುಗಳು ಮತ್ತು ಸಂಚಿತ ನಷ್ಟಗಳು ಯಾವುದಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ, ಎಲ್ಲಾ ಬಾಬ್ತುಗಳ ಮೊತ್ತ ಆಗಿರತಕ್ಕದ್ದು.

9. 10 ರಿಂದ 17 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳು ತ:ಖ್ತೆಯಿಂದ ಇತರೆ ತ:ಖ್ತೆಗಳ ಅಂಕಿ ಅಂಶಗಳಿಗೆ ತಪ್ಪದೇ ತಾಳೆ ಇರತಕ್ಕದ್ದು.

10. 19 ರಿಂದ 21 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿಂಗ್ ರೆಗ್ಯೂಲೇಶನ್ ಕಾಯ್ದೆ ಅಡಿಯಲ್ಲಿ ಬರುವ

    1) ಪಟ್ಟಣ ಸಹಕಾರ ಬ್ಯಾಂಕುಗಳು

    2) ನೌಕರರ ಪತ್ತಿನ ಸಹಕಾರ ಬ್ಯಾಂಕುಗಳು

    3) ಇತರೆ ಪತ್ತಿನ ಸಹಕಾರ ಸಂಘಗಳ

ಮಾಹಿತಿಯನ್ನು ಸಹಕಾರ ಸಂಘಗಳ ಪಟ್ಟಿಯಲ್ಲಿ ನಮೂದಿಸಿದ ಒಟ್ಟು ಸಂಘಗಳಿಗೆ ತಾಳೆಯಾಗತಕ್ಕದ್ದು.

11. 22 ರಿಂದ 25 ರವರೆಗಿನ ತ:ಖ್ತೆಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ ಅಡಿಯಲ್ಲಿ ಬರದೇ ಇರುವ

    1) ಪಟ್ಟಣ ಸಹಕಾರ ಬ್ಯಾಂಕುಗಳು

    2) ನೌಕರರ ಪತ್ತಿನ ಸಹಕಾರ ಬ್ಯಾಂಕುಗಳು

    3) ಇತರೆ ಪತ್ತಿನ ಸಹಕಾರ ಸಂಘಗಳ

ಮಾಹಿತಿಯನ್ನು ಸಹಕಾರ ಸಂಘಗಳ ಪಟ್ಟಿಯಲ್ಲಿ ನಮೂದಿಸಿದ ಒಟ್ಟು ಸಂಘಗಳಿಗೆ ತಾಳೆಯಾಗತಕ್ಕದ್ದು.

ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳು, ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರನ್ವಯ ನೋಂದಾಯಿಸಿದ, ಎಲ್ಲಾ ಸಹಕಾರ ಸಂಘಗಳ ಅಂದರೆ, ಗ್ರಾಮ ಮಟ್ಟದ ತಾಲ್ಲೂಕು ಮಟ್ಟ ಮತ್ತು ತಾಲ್ಲೂಕು ಮಟ್ಟ ಮೀರಿ, ಜಿಲ್ಲಾ ಮಟ್ಟ ಮತ್ತು ಜಿಲ್ಲಾ ಮಟ್ಟ ಮೀರಿ, ರಾಜ್ಯ ಮಟ್ಟ ಮತ್ತು ರಾಜ್ಯ ಮಟ್ಟ ಮೀರಿ, ಅಂಕಿ ಅಂಶಗಳ ಮಾಹಿತಿಯನ್ನು ತಪ್ಪದೇ ಸಂಬಂಧಿಸಿದ ಸಂಬಂಧಿಸಿದ ತ:ಖ್ತೆಗಳಲ್ಲಿ ನಮೂದಿಸತಕ್ಕದ್ದು. ಅಂಕಿ ಅಂಶದ ಟೇಬಲ್ ಸಂಖ್ಯೆ: 46ಃ–ರಲ್ಲಿ

ಮೇಲೆ ತಿಳಿಸಿರುವ ಎಲ್ಲಾ ಸಹಕಾರ ಸಂಘಗಳ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸೇರಿದಂತೆ ಉದ್ಯೋಗಿಗಳ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಿ ತಪ್ಪದೇ ಸಲ್ಲಿಸತಕ್ಕದ್ದು. ಈ ವಿಷಯವನ್ನು ಜಿಲ್ಲಾ ಉಪ ನಿಬಂಧಕರುಗಳು ವೈಯಕ್ತಿಕವಾಗಿ ಗಮನದಲ್ಲಿ ಇಟ್ಟುಕೊಳ್ಳತಕ್ಕದ್ದು.

12. 2007–2008 ರಲ್ಲಿ ಕಳುಹಿಸಿರುವ ಅಂಕಿ ಅಂಶಗಳ ಮಾಹಿತಿಗಳು ಅನಗತ್ಯವಾಗಿ 2008–2009 ರ ಅಂಕಿ ಅಂಶಗಳ ಮಾಹಿತಿಗಳಲ್ಲಿ ಪುನರಾವರ್ತನೆ ಆಗಬಾರದು.
13. ವಾರ್ಷಿಕ ಮುಂಗಡ ಅಂಕಿ ಅಂಶಗಳ (Advance Statistics) ಮಾಹಿತಿಯಲ್ಲಿ ತೋರಿಸಿದ ಸಹಕಾರ ಸಂಘಗಳ ಒಟ್ಟು ಸಂಖ್ಯೆಗೂ, ವಾರ್ಷಿಕ ಅಂಕಿ ಅಂಶಗಳ (Annual Numerical Returns) ಮಾಹಿತಿಯಲ್ಲಿ ತೋರಿಸಿದ ಒಟ್ಟು ಸಹಕಾರ ಸಂಘಗಳ ಸಂಖ್ಯೆಗಳಿಗೂ ಹಾಗೂ ವಿವಿಧ ಸಹಕಾರ ಸಂಘಗಳ (List of Societies) ಒಟ್ಟು ಸಂಖ್ಯೆಗೂ ತಾಳೆ ಇರತಕ್ಕದ್ದು.

ವಾರ್ಷಿಕ ಮುಂಗಡ ಅಂಕಿ ಅಂಶಗಳು (Advance Statistics) ವಾರ್ಷಿಕ ಅಂಕಿ ಅಂಶಗಳ (Annual Numerical Returns) ತ:ಖ್ತೆಗಳು ಕಾರ್ಯ ಮುಗಿಯುವ ತನಕ ಸಂಬಂಧಿಸಿದ ಸಿಬ್ಬಂದಿಗೆ ಇತರೆ ಕೆಲಸಗಳ ನಿರ್ವಹಣೆಯನ್ನು ಸಾಧ್ಯವಾದಷ್ಟು ವಹಿಸಕೂಡದೆಂದು ಸೂಚಿಸಿದೆ.

9 ರಿಂದ 51 ರವರೆಗೆ ಪೂರ್ಣ ಅಂಕಿ ಅಂಶಗಳನ್ನು ದಾಖಲಿಸಿದ ತರುವಾಯ ಕೆಲವು ಮುಖ್ಯವಾದ ಟೇಬಲ್‌ಗಳ ಕೆಳಗೆ ಒಂದು <u>ತಪ್ಪು ಸರಿಪಡಿಸುವ ಯಾದಿ (ಇಖಖಔಖ ಐಖಖಖಿ</u>) ಯನ್ನು ಗಣಕಯಂತ್ರದಲ್ಲಿ ಅಳವಡಿಸಲಾಗಿದೆ. ಸಂಬಂಧಪಟ್ಟ ಟೇಬಲ್ ಗಳಲ್ಲಿ ತಾಳೆಯಾಗಿರುವ ಅಂಕಿ ಅಂಶಗಳನ್ನು ದಾಖಲಿಸಿದರೆ <u>OK-NO-ERRO</u>R ಎಂದು ಸೂಚಿಸುತ್ತದೆ. ತಪ್ಪು ಅಂಕಿ ಅಂಶಗಳನ್ನು ದಾಖಲಿಸಿದರೆ <u>ERROR DETECTED</u> ಅಂತಾ ತಿಳಿಸಿ, ಅದಕ್ಕೆ ಸಂಬಂಧಪಟ್ಟ ತಪ್ಪುಗಳನ್ನು ಹೇಗೆ ನಿವಾರಿಸಬೇಕು ಎಂಬ ನಿರ್ದೇಶನಗಳನ್ನು ಟೇಬಲ್ ಕೆಳಗೆ ತಪ್ಪು ಸರಿಪಡಿಸುವ ಯಾದಿ <u>(ERROR LIST)</u> ಯಲ್ಲಿ ತಿಳಿಸಲಾಗಿದೆ.

ಅದರ ಪ್ರಕಾರ ಸರಿಯಾದ ಅಂಕಿ ಅಂಶಗಳನ್ನು ದಾಖಲಿಸಿ, ERROR LIST ನಲ್ಲಿ OK-NO-ERROR ಬಂದ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ಆದರೂ ಮಾಹಿತಿಗಳ ನಿಖರತೆಯನ್ನು ಪರಿಶೀಲಿಸದೇ, ಕೆಲವು ಉಪ ನಿಬಂಧಕರುಗಳು ಹಿಂದಿನ ವರ್ಷ ವಿಳಂಬವಾಗಿ ಕಳುಹಿಸಿದ್ದರಿಂದ ಕ್ರೋಢೀಕೃತ ಅಂಕಿ ಅಂಶಗಳನ್ನು ಸಮರ್ಪಕವಾಗಿ ಸಿದ್ಧಪಡಿಸಲು ತೊಂದರೆ ಉಂಟಾದ ಅನುಭವಗಳು ಈ ವರ್ಷವು ಉಂಟಾಗಿರುತ್ತವೆ. ತ:ಖ್ತೆಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಮಾಹಿತಿಯನ್ನು ಪತ್ರ ಬರೆದು ತರಿಸುವಲ್ಲಿಯೂ ಸಾಕಷ್ಟು ವಿಳಂಬವಾಗುತ್ತಿರುತ್ತದೆ. ವಿಷಯ ನಿರ್ವಾಹಕರೊಂದಿಗೆ ವಾರ್ಷಿಕ ಅಂಕಿ ಅಂಶಗಳ ಮಾಹಿತಿಯನ್ನೊಳಗೊಂಡ ಸಿಡಿಯನ್ನು ಕಳುಹಿಸುವುದು ಅವಶ್ಯವಾಗಿರುತ್ತದೆ. ಸಿಡಿಯಲ್ಲಿ ನ್ಯೂನ್ಯತೆಗಳು ಕಂಡು ಬಂದರೆ ವಿಷಯ ನಿರ್ವಾಹಕರೊಂದಿಗೆ ಮಾಹಿತಿ ಪಡೆದು ವಿಳಂಬವಿಲ್ಲದೆ ಸರಿಪಡಿಸಬಹುದಾಗಿದೆ.

ಆದ್ದರಿಂದ 2008–2009 ರ ವಾರ್ಷಿಕ ಅಂಕಿ ಅಂಶ (ANNUAL NUMERICAL RETURNS) ಗಳನ್ನು ಪರಿಷ್ಕೃತವಾದ ಟೇಬಲ್‌ಗಳಲ್ಲಿ ಸಂಗ್ರಹಿಸಿ ಪರಿಶೀಲಿಸಿ, ಕ್ರೋಢೀಕರಿಸಿ ನಿಖರವಾದ ಮಾಹಿತಿಯನ್ನು ಗಣಕಯಂತ್ರದಲ್ಲಿ ಅಳವಡಿಸಿ ಸಿಡಿಯನ್ನು ಹಾಗೂ ಮುದ್ರಿಸಿ ಬೈಂಡ್ ಮಾಡಿದ ಪ್ರತಿಯೊಂದಿಗೆ ವಿಷಯ ನಿರ್ವಾಹಕರೊಂದಿಗೆ ಈ ಕಛೇರಿಗೆ ದಿನಾಂಕ 30–06–2009 ರ ಒಳಗೆ ಕಳುಹಿಸಿ ಕೊಡಲು ಸೂಚಿಸಲಾಗಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು
(ಆಡಳಿತ ಮತ್ತು ಅಭಿವೃದ್ಧಿ) ಬೆಂಗಳೂರು.